ಅವರು ಬಹುಶಃ ಜಾಣರಾಗಿದ್ದಾರೆ, ಅವರು ತಪ್ಪಿಸಿಕೊಳ್ಳುತ್ತಾರಲ್ಲಾ ಎನ್ನುವಂತದ್ದು ಪ್ರಾಯಶಃ ಮಾನ್ಯ ವಿರೋಧ ಪಕ್ಷದ ಉಪ ನಾಯಕರ ಪ್ರಶ್ನೆ ಇರಬಹುದು. ಖಂಡಿತವಾಗಿಯೂ ಯಾರನ್ನೂ ಇದರಲ್ಲಿ ನಾವು ಉಳಿಸುವಂತಹ ಪ್ರಯತ್ನ ಮಾಡುವುದಿಲ್ಲ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೇ, ಒಂದು ಸ್ಪೇರ್‌ಕೇಸ್ ಅನ್ನು ಕೆಳಗಡೆಯಿಂದ ಗುಡಿಸುವುದಕ್ಕಾಗುವುದಿಲ್ಲ, ಮೇಲುಗಡೆಯಿಂದಲೇ ಗುಡಿಸಿಕೊಂಡು ಬರಬೇಕು. ಇದು ಸರ್ಕಾರದ ಗಮನದಲ್ಲಿ ಇರಲಿ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ಬೀಚಿಯವರು ಒಂದು ಸಲ ಹೇಳಿದ್ದರು, ಗೋಪುರವನ್ನು ಹೇಗೆ ಕಟ್ಟಿದ್ದೀರಿ ನೀವು ಅಂದರೆ, ಅದೇನು ಬಹಳ ಸುಲಭವಾದುದು, ಮೇಲಿನಿಂದ ಕಟ್ಟಿಕೊಂಡು ಬಂದು ಕೆಳಗಿಳಿದು ಹೋದೆವು ಎಂದು ಹಾಗೇ ಆಗುತ್ತದೆ.

SRI S. SURESH KUMAR : It is cleaning the system, not building the system.

SRI M.P. PRAKASH : I know that.

ರೆವಿನ್ಯೂ ಭೂಮಿ ನೋಂದಾವಣೆ

571 - ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮಾಂತರ ಪ್ರದೇಶಗಳಲ್ಲಿ ಕನಿಷ್ಟ 5 ಗುಂಟೆಗಿಂತ ಕಡಿಮೆ ಇರುವ ರೆವಿನ್ಯೂ ಭೂಮಿ ನೋಂದಾವಣೆಯಾಗದೆ ಮನೆ ಕಟ್ಟಲು ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ, ಇದನ್ನು ಸರಿಪಡಿಸಲು ಯಾವ ಕ್ರಮ ಕೈಗೊಳ್ಳಲಾಗುವುದು?

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು) :

ಅ) ವ್ಯವಸಾಯಗಾರರು 0-5 ಗುಂಟೆಗಿಂತ ಕಡಿಮೆ ಇರುವ ರೆವಿನ್ಯೂ ಭೂಮಿಯನ್ನು ಗ್ರಾಮಾಂತರ ಪ್ರದೇಶದಲ್ಲಿ ನೋಂದಾಯಿಸಿಕೊಳ್ಳಲು ಯಾವುದೇ ನಿರ್ಬಂಧವಿರುವುದಿಲ್ಲ. ನಿಯಮಾನುಸಾರ ಭೂಪರಿವರ್ತನೆಯಾದ ಭೂಮಿಯಿಂದ ನಿರ್ಮಿಸಿದ ನಿವೇಶನಗಳ ಬಡಾವಣೆಗಳ ಮತ್ತು ಅಧಿಕೃತ ಗ್ರಾಮಠಾಣ ನಿವೇಶನಗಳಿಗೆ ಸಂಬಂಧಪಟ್ಟಂತೆ ದಸ್ತಾವೇಜುಗಳ ನೋಂದಾವಣೆಯನ್ನು ನಿಷೇಧಿಸಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಉತ್ತರ ಒದಗಿಸಿದ್ದಾರೆ. ಆದರೆ ಎಲ್ಲಾ ಸಬ್ ರಿಜಿಸ್ಟ್ರಾರ್‌ಗಳಲ್ಲಿ 2 ಗುಂಟೆ ಜಮೀನನ್ನು ರಿಜಿಸ್ಟರ್ ಮಾಡಿಕೊಳ್ಳುತ್ತಿಲ್ಲ. ರಿಜಿಸ್ಟರ್ ಮಾಡಿಕೊಳ್ಳುವಂತೆ ಸರ್ಕಾರವು ಕಟ್ಟುನಿಟ್ಟಿನ ಒಂದು ಆದೇಶ ಕೊಡಬೇಕೆಂದು ಕೋರುತ್ತೇನೆ.

ಶ್ರೀ ರಮೇಶ್ ಸಿ. ಜಿಗಜಿಣಗಿ : ಮಾನ್ಯ ಅಧ್ಯಕ್ಷರೇ, ಹಿಂದೆ ಫ್ರಾಗ್‌ಮೆಂಟೇಷನ್ ಆಕ್ಟ್ ಇತ್ತು. ಆ ಆಕ್ಟ್ ಹೋದ ಮೇಲೆ, ಎಲ್ಲೂ ಕೂಡ ರಿಜಿಸ್ಟರ್ ಮಾಡಬೇಡಿ ಎಂದು ಸರ್ಕಾರ ಸೂಚನೆ ಕೊಟ್ಟಿಲ್ಲ. ಆದರೂ ಕೂಡ ಮಾನ್ಯ ಸದಸ್ಯರು ಕೋರುವಂತೆ ಇನ್ನೊಮ್ಮೆ ಒಂದು ಸುತ್ತೋಲೆಯನ್ನು ಸಬ್ ರಿಜಿಸ್ಟ್ರಾರ್ ಕಛೇರಿಗೆ ಕಳುಹಿಸತಕ್ಕ ವ್ಯವಸ್ಥೆಯನ್ನು ಸಧ್ಯದಲ್ಲೇ ನಾನು ಮಾಡುತ್ತೇನೆ.

ಶಿಡ್ಲಘಟ್ಟ ತಾಲ್ಲೂಕು ಆನೇಮಡಗು ಗ್ರಾಮಕ್ಕೆ ಸಂಬಂಧಿಸಿದಂತೆ ದಾಖಲಾಗಿರುವ ಕ್ರಿಮಿನಲ್ ಮೊಕದ್ದಮೆಗಳ ಕುರಿತು

1 - ಶ್ರೀ ಹೆಚ್. ಶಿವಪ್ಪ (ಹರಿಹರ) : ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಡ್ಲಘಟ್ಟ ತಾಲ್ಲೂಕು ದಿಬ್ಬೂರುಹಳ್ಳಿ ಪೋಲೀಸ್ ಸ್ಟೇಷನ್ ವ್ಯಾಪ್ತಿಯಲ್ಲಿ ಆನೇಮಡಗು ಗ್ರಾಮವಿರುವುದು ನಿಜವೇ?

ಆ) ಸದರಿ ಗ್ರಾಮದಲ್ಲಿ 1967 ರಿಂದ 1989 ರವರೆಗೆ ದಾಖಲಾಗಿರುವ ಕ್ರಿಮಿನಲ್ ಮೊಕದ್ದಮೆಗಳ ಸಂಖ್ಯೆ ಎಷ್ಟು?

ಇ) 1989 ರಿಂದ ಇಲ್ಲಿಯವರೆಗೆ ದಾಖಲಾಗಿರತಕ್ಕಂತಹ ಕ್ರಿಮಿನಲ್ ಮೊಕದ್ದಮೆಗಳೆಷ್ಟು? ಒಂದು ವೇಳೆ 1989ರಿಂದ ಈಚೆಗೆ ಹೆಚ್ಚು ಕ್ರಿಮಿನಲ್ ಮೊಕದ್ದಮೆಗಳ ಆ ಗ್ರಾಮದಲ್ಲಿರುವ ಜನರ ಮೇಲೆ ದಾಖಲಾಗಿದ್ದರೆ ಅದಕ್ಕೆ ಕಾರಣಗಳೇನು?

ಶ್ರೀ ಆರ್. ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು) :

ಅ) ಹೌದು.

ಆ) 1967 ರಿಂದ 1989ರ ವರೆಗೆ ಈ ಗ್ರಾಮದಿಂದ 7 ಕ್ರಿಮಿನಲ್ ಮೊಕದ್ದಮೆಗಳು ದಾಖಲಾಗಿರುತ್ತವೆ.

ಇ) 1989ರಿಂದ ಇಲ್ಲಿಯವರೆಗೆ ಆನೇಮಡಗು ಗ್ರಾಮದಿಂದ 42 ಕ್ರಿಮಿನಲ್ ಮೊಕದ್ದಮೆಗಳು ದಾಖಲಾಗಿರುತ್ತದೆ.

ಅಪರಾಧಗಳು ಹೆಚ್ಚಲು ರಾಜಕೀಯ ದ್ವೇಷಗಳೇ ಮುಖ್ಯ ಕಾರಣವಾಗಿರುತ್ತದೆ.

ಶ್ರೀ ಹೆಚ್. ಶಿವಪ್ಪ : ಮಾನ್ಯ ಅಧ್ಯಕ್ಷರೇ, ಸದರಿ ಶಿಡ್ಲಘಟ್ಟ ತಾಲ್ಲೂಕು ಇಂತಹ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಬರುತ್ತದೆಯೇ ಎಂಬ ನನ್ನ ಪ್ರಶ್ನೆಗೆ 'ಹೌದು' ಎಂದು ಹೇಳಿದ್ದಾರೆ. ಅವರು